# ಜಗದಂತಾರ್ಯಾಮಿ ನೀನು ನಿನ್ನ ಬಟ್ಟಬಯಲೆಂದು

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 155.
2. **Ref.:** Samagra Dasa Sahity, Samputa 4, published by Kannada & Culture Dept, Govt of Karnataka, Bengaluru, page No. 53.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 649.
4. **Ref.**: Hare Srinivasa, Taratamyokta Bhajana Samagra Sangraha Vol-1, by Dr. Purnabodha Vadirajacharya Kadagadakai, Belagavi, page No. 236.
5. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 & 4 are same & are slightly different than Ref. 1 and are not considered here.

ಜಗದಂತಾರ್ಯಾಮಿ ನೀನು ನಿನ್ನ ಬಟ್ಟಬಯಲೆಂದು

ಬಗೆವವನು ಜಗದೊಳಗೆ ಬ್ರಹ್ಮಹತ್ಯಾಕಾರಿ

ಅಗಣಿತ ಗುಣ ನೀನು ನಿನ್ನ ಗುಣಗಳಿಷ್ಟೆಂದು

ಬಗೆವವನು ಜಗದೊಳಗೆ ಸ್ವರ್ಣಸ್ತೇಯಿ

ಜಗದೊಡೆಯ ನೀನಿರಲು ಅನ್ಯ ದೇವನು ಒಡೆಯನೆಂದು

ಬಗೆವವನು ಜಗದೊಳಗೆ ಮದ್ಯಪಾನಿ

ಜಗದ ತಂದೆ ನೀನು ನಿನ್ನ ದಾಸನೆಂದೆನಿಸಿದೆ ನೀನೆ ತಾನೆಂದು

ಬಗೆವವನೆ ಜಗದೊಳಗೆ ಗುರುತಲ್ಪಗಾಮಿ, ಅವರ ಸಾಕ್ಷಿ

ಯೋಗದಿಂದಲಿ ಇಹ ಜನರು

ಜಗದೊಳಗೆ ಮುಖ್ಯ ಪಂಚ ಮಹಾ ಪಾತಕರು

ಅದು ಕಾರಣದಿಂದ ನೀ ನಿತ್ಯ, ನೀ ಸತ್ಯ, ನೀ ಬಲ, ನೀ

ಅಗಣಿತ ಗುಣನಿಲಯ ನೀ ಸಕಲ ಸುಖ ಕಾರಣದಿಂದ

ನಂಬಿದೆ ನೀ ಸಲಹಯ್ಯ ಪುರಂದರ ವಿಠಲ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಗುರುತಲ್ಪಗಾಮಿ** = ಗುರುವಿನ ಹೆಂಡತಿಯೊಡನೆ ನೀಚ ಸಂಬಂಧವಿಟ್ಟುಕೊಳ್ಳುವವನು. ಇದನ್ನು ಪಂಚ ಮಹಾ ಪಾತಕಗಳಲ್ಲಿ ಒಂದಾಗಿ ಎಣಿಸಿದೆ.

**ಸ್ತೇಯಿ** = ಕದ್ದವ, ದರೋಡೆಗಾರ

**ಬಟ್ಟಬಯಲು ಎನ್ನುವವ** = ಶೂನ್ಯವಾದಿ

**ಬ್ರಹ್ಮಹತ್ಯಾಕಾರಿ** = ಪಂಚ ಮಹಾ ಪಾತಕಿಗಲ್ಲಿ ಒಬ್ಬ

**ನಿನ್ನ ಗುಣ ಇಷ್ಟೆಂದು ಬಗೆವವನು** = ವಿಶಿಷ್ಟಾ ದ್ವೈತಿಗಳು

**ಸ್ವರ್ಣ ಸ್ತೆಯೀ** = ಬಂಗಾರಗಳ್ಳ, (ಪಂಚ ಮಹಾ ಪಾತಕಿಗಲ್ಲಿ ಒಬ್ಬ)

**ಮಧ್ಯಪಾನಿ** = ಪಂಚ ಮಹಾ ಪಾತಕಿಗಲ್ಲಿ ಒಬ್ಬ

**ನೀನೇ ತಾನೆಂದು ಬಗೆಯುವವನು** = ಅದ್ವೈತಿ

**ಸಾಕ್ಷಿಯೋಗ** = ಇವರನ್ನು ಕೂಡಿಕೊಂಡಿರುವವನು (ಪಂಚ ಮಹಾ ಪಾತಕಿಗಲ್ಲಿ ಒಬ್ಬ)

**Classification:** Ugabhoga
**Ankita:** purandara vittala
**Location:** NA
**Category:** Artha Bhava
**Sub-Category:** loka, brahma, pApa, aganita, bangara, kalla, deva, tande, jana, satya, sukha, patni,
**Pravachana:** NA
**Explanation:** NA